



ಸಮುದಾಯದ ಮಹತ್ವದ ಬೀದಿ ನಾಟಕಗಳಲ್ಲಿ ಒಂದಾದ 'ಪತ್ರೆಸಂಗಪ್ಪನ ಕೊಲೆ'ಯ ದೃಶ್ಯ.

ಹೇಗೆ ಭಿನ್ನ ಎನ್ನುವುದನ್ನು ತೋರಿಸಿಕೊಟ್ಟಿತು. ಸಂಸರ ವಿಗಡ ವಿಕ್ರಮರಾಯವನ್ನು ತನಗೆ ಬೇಕಾದಂತೆ ಪುನರ್ ರೂಪಿಸಿತು. ಸಾಮಾನ್ಯರ ಕಣ್ಣುಗಳ ಮೂಲಕ ರಾಜ ಪ್ರಭುತ್ವವನ್ನು ಬಿಡಿಸಿಟ್ಟಿತು. ಕೆ.ವಿ. ನಾರಾಯಣ ಅವರು ಅದನ್ನು ಸಮುದಾಯ ಕಂಡುಕೊಳ್ಳುತ್ತಿದ್ದ ದಾರಿಗೆ ಒಂದು ವಿಸಿಟಿಂಗ್ ಕಾರ್ಡ್ ಏನೋ ಎನ್ನುವಂತೆ ರೂಪಿಸಿದರು. ಪ್ರಸನ್ನ ಇದನ್ನು ರಂಗಕ್ಕೇರಿಸಿದಾಗ ಇಡೀ ಹವ್ಯಾಸಿ ರಂಗಭೂಮಿ ಬೆರಗಾಗಿ ನಿಂತಿತು. ಈ ನಾಟಕಕ್ಕೆ ಸಿ. ವೀರಣ್ಣ ಅವರು ಬರೆದ 'ಮೈಸೂರು ರಾಜ್ಯದ ದೊರೆಯೇ ರಣಧೀರ ನಾಯ್ಕನೇ...' ಹಾಡಂತೂ ರಂಗಭೂಮಿ ಇತಿಹಾಸದಲ್ಲಿನ ಎವರ್‌ಗ್ರೀನ್ ಹಿಟ್. ಅಲ್ಲಿಯವರೆಗೆ ಪುರಾಣ, ಜಾನಪದಕ್ಕೆ ಹೆಚ್ಚು ಒತ್ತುಕೊಟ್ಟು ಅದರ ಸುತ್ತವೇ ಸುತ್ತುತ್ತಿದ್ದ, ರಂಜಿಸುತ್ತಿದ್ದ ಬಹುತೇಕ ತಂಡಗಳಿಗೆ, ನಾಟಕ ನೋಡಿದ ಪ್ರೇಕ್ಷಕರಿಗೆ ಇನ್ನು ರಂಗಭೂಮಿ ಮೊದಲಿನಂತೆ ಇರುವುದಿಲ್ಲ ಎನ್ನುವುದು ಮನವರಿಕೆಯಾಗಿ ಹೋಯಿತು.

'ಅದು ಹೌದು' ಎನ್ನುವಂತೆ ಸಮುದಾಯ ಇನ್ನೂ ಹತ್ತು ಹೆಜ್ಜೆ ಮುಂದೆ ಇಡಲು ಸಜ್ಜಾಗಿಯೇ ಬಿಟ್ಟಿತು. ನಾಲ್ಕು ಗೋಡೆಗಳ ಮಧ್ಯೆ ಇದ್ದ ನಾಟಕವನ್ನು ಅಲ್ಲಿಂದ ಬಿಡಿಸಿಕೊಂಡು ಜನರ ಬಳಿ ಕರೆದೊಯ್ಯಲು ಸಜ್ಜಾಯಿತು. ಹಾಗೆ ಬಿಡಿಸಿಕೊಂಡು ಬರಲು ಸರಿಯಾದ ಸನ್ನಿವೇಶವೂ ಸೃಷ್ಟಿಯಾಗಿತ್ತು. 'ಚಿತ್ರಾ' ತಂಡ ಆ ವೇಳೆಗೆ ಬೀದಿ ನಾಟಕ ಆಡಿತ್ತು. ನಾವೆಲ್ಲರೂ 'ಆ ದಶಕ' ಎಂದು ಕಣ್ಣರಳಿಸಿ ನೋಡುವ 70 ಹಾಗೂ 80ರ ದಶಕದ ರೆಬೆಲ್ ಗುಣ ಆಗತಾನೇ ಮೈ ಮುರಿದು ಎದ್ದು ನಿಲ್ಲಲು ಸಜ್ಜಾಗಿತ್ತು. ಬ್ರೆಕ್ಟ್ ರಂಗರೂಪ ನೀಡಿದ ಗಾರ್ಕಿಯ 'ತಾಯಿ' ಕಾದಂಬರಿಯನ್ನು ಸಮುದಾಯ ಕೈಗೆತ್ತಿಕೊಂಡಿತು. ನಾಟಕ ಹಲವು ಹೋರಾಟಗಳಿಗೆ ಮುನ್ನುಡಿ ಬರೆದೇಬಿಟ್ಟಿತು.

1979ರಲ್ಲಿ ಯಾವಾಗ ಸಮುದಾಯ ತಂಡ ಸಾಂಸ್ಕೃತಿಕ ಜಾಥಾವನ್ನು ಘೋಷಿಸಿತೋ ಸಾಂಸ್ಕೃತಿಕ ಲೋಕ ಅಕ್ಷರಶಃ ಇಬ್ಭಾಗವಾಗಿ ಹೋಯಿತು. ರಂಗಭೂಮಿಯ ಮಡಿವಂತಿಕೆಯನ್ನು ಮುರಿದದ್ದು ಹಲವರ ಕೆಂಗಣ್ಣಿಗೆ ಗುರಿ ಆದರೆ, ಸಮಾಜವನ್ನು ಪ್ರಶ್ನೆ ಮಾಡಲು ಹೊರಟಿದ್ದು ಇನ್ನಷ್ಟು



ಮಂದಿಗೆ. ಈ ಜಾಥಾ ಹುಟ್ಟುಹಾಕಿದ ಈ ಬಿರುಸಿನ ಚರ್ಚೆ ಸಮುದಾಯದ ಹುಮ್ಮಸ್ಸನ್ನು ಇನ್ನಷ್ಟು ಹೆಚ್ಚಿಸಿತು. ಇದೇ ಕಾರಣವಾಗಿ ನರಗುಂದ ಹಾಗೂ ನವಲಗುಂದದಲ್ಲಿ ಜರುಗಿದ ಗೋಲಿಬಾರ್ ನೆಪವಾಗಿ ಇಡೀ ರಾಜ್ಯದ ರೈತರ ದಯನೀಯ ಪರಿಸ್ಥಿತಿಗೆ ಕನ್ನಡಿ ಹಿಡಿಯಲು ರೈತನತ್ತ ಸಮುದಾಯ ಜಾಥಾ ಹೊರಟಿತು. ಆನಂತರ ಭೀಕರ ಬರಗಾಲದ ವಿರುದ್ಧ, ಅಣು ಯುದ್ಧದ ವಿರುದ್ಧ, ಪರಿಸರದ ಉಳಿವಿಗೆ ಎಂದು ಕರ್ನಾಟಕ ಮತ್ತೆ ಮತ್ತೆ ಜಾಥಾವನ್ನು ಕಂಡಿತು.

'ಸಮುದಾಯ' ಎನ್ನುವುದು ಹೊಸ ಪ್ರಯೋಗಗಳ ಕ್ಯಾನ್ವಾಸ್. ಆ ಕಾರಣಕ್ಕಾಗಿಯೇ ಯು.ಆರ್. ಅನಂತಮೂರ್ತಿ ಅವರ 'ಸಂಸ್ಕಾರ' ಕಾದಂಬರಿ ಯಥಾವತ್ತಾಗಿ, ನಾಟಕ ರೂಪ ಪಡೆಯದೇ ದೇವೇಂದ್ರರಾಜ್ ಅಂಕುರ್ ಅವರ ನಿರ್ದೇಶನದಲ್ಲಿ ರಂಗವೇರಿತು. ಸಿ. ಬಸವಲಿಂಗಯ್ಯ ಅವರು ಎಚ್.ಎಸ್. ಶಿವಪ್ರಕಾಶರ 'ಸಮಗಾರ ಭೀಮವ್ವ' ಕವಿತೆಯನ್ನು ಕಾವ್ಯ ರಂಗವಾಗಿ ರೂಪಿಸಿದರು.

'ಬರೀ ನಾಟಕದಲ್ಲಿ ಮಾತ್ರ ಯಾಕೆ ಪ್ರಶ್ನೆ ಎತ್ತುವುದು?' ಎನ್ನುವಂತೆ ಸಮುದಾಯ ಸಿನಿಮಾಗಳಲ್ಲಿ ಹೊಸ ನೋಟ ಹರಡಲು 'ಚಿತ್ರ ಸಮುದಾಯ', ಪುಸ್ತಕ ಲೋಕಕ್ಕೆ 'ಗ್ರಂಥ ಸಮುದಾಯ', ಜನರನ್ನು ವಿಚಾರವಾದದತ್ತ ಆರಿಸಿ ತರಲು 'ಸಮುದಾಯ ವಾರ್ತಾಪತ್ರ' ಹೀಗೆ... ಹತ್ತು ಹಲವು ಪ್ರಯೋಗಗಳನ್ನು ನಡೆಸಿತು.

ಈ ಎಲ್ಲಾ ನೆನಪುಗಳ ಹೊತ್ತವರು ನಾಲ್ಕು ದಿನಗಳ ಕಾಲ ರವೀಂದ್ರ ಕಲಾಕ್ಷೇತ್ರದ ಆವರಣವನ್ನು ರಂಗು ರಂಗಾಗಿಸಿದ್ದರು. ಕಲಾವಿದರು ಕ್ಯಾನ್ವಾಸ್ ಮೇಲೆ ಚಿತ್ರ ಬಿಡಿಸಿದರು, ಗಾಯಕರು ಹೋರಾಟದ ಹಾಡುಗಳಿಗೆ ದನಿ ನೀಡಿದರು, ನಾಟಕಗಳ ಉತ್ಸವ ನಡೆಯಿತು. ಸಮುದಾಯದ ಕನಸು ಕಂಡ, ಅದರ ಕೈ ಹಿಡಿದು ಮುನ್ನಡೆಸಿದ ಹಿರಿಯರಿಗೆ ರಂಗ ಗೌರವ ನೀಡಲಾಯಿತು.

ಮತ್ತೆ ಒಂದು ಸೊಲ್ಲು ಕಲಾಕ್ಷೇತ್ರದೊಳಗೆ ಚಿಮ್ಮಿತು. 'ಎಲ್ಲಿಂದ ಬಂದಿರೆಂದು ಕೇಳಬಹುದು ನೀವು, ಜನರ ನಡುವಿನಿಂದ ಎಂದು ಹೇಳತೇವೆ ನಾವು' ಎಂದೊಡನೆಯೇ ಇಡೀ ಸಭಾಂಗಣ ಎದ್ದು ನಿಂತು 'ಮತ್ತೆ ಪಯಣ ಎಲ್ಲಿಗೆಂದು ಕೇಳಬಹುದು ನೀವು, ತಿರುಗಿ ಮತ್ತೆ ಜನರ ನಡುವೆ ಹೋಗುತೇವೆ ನಾವು...' ಎಂದು ಮರು ಉತ್ತರ ನೀಡಿತು. ಥೇಟ್ ಅಂತೆಯೇ ಸಮುದಾಯ ಮತ್ತೆ ಜನರ ನಡುವೆ ಹೋಗಲು ಸಜ್ಜಾಗಿ ನಿಂತಿದೆ.